



ಭಗವತಿಯಲ್ಲಿ ಶರಣಾಗತಿಯನ್ನು ಹೊಂದಿದುದೇ ಆದರೆ ಭಕ್ತರ ಸಕಲ ಭಯ ಒಮ್ಮೆಗೇ ಕಂಬಿಕೀಳುತ್ತದೆ.

ಭಗವತಿ ನನಗೆ (ಪರಮಹಂಸರಿಗೆ) ಕಾಳೀ ದೇವಾಲಯದಲ್ಲಿ ತೋರಿಸಿದಳು, ತಾನೇ ಎಲ್ಲವೂ ಆಗಿರುವುದಾಗಿ. ಎಲ್ಲವೂ ಚಿನ್ಮಯವಾಗಿರುವುದನ್ನು ತೋರಿಸಿದಳು. ಪ್ರತಿಮೆ ಚಿನ್ಮಯವಾಗಿ, ವೇದಿ ಚಿನ್ಮಯವಾಗಿ, ಕೋಶಾ-ಕುಶಿ (ಪೂಜಾಪಾತ್ರೆ) ಚಿನ್ಮಯವಾಗಿ ಕಂಡವು.

ಗರ್ಭಗುಡಿಯಲ್ಲಿರುವುದೆಲ್ಲ ರಸಮಯವಾಗಿ—ಸಚ್ಚಿದಾನಂದಮಯವಾಗಿ ಕಂಡುಬಂದವು. ಕಾಳೀ ದೇವಾಲಯದ ಎದುರಿಗೆ ಒಬ್ಬ ದುಷ್ಟನನ್ನು ನೋಡಿದೆ. ಆದರೆ ಆತನಲ್ಲೂ ಆಕೆಯ ಶಕ್ತಿ ಜ್ವಲಿಸುತ್ತಿದ್ದು ಕಣ್ಣಿಗೆ ಬಿತ್ತು.... ಆದ್ದರಿಂದಲೇ ನಾನು ಭಗವತಿಗೆ ಅರ್ಪಿಸಬೇಕಾದ ಪೂರಿಯನ್ನು ಬೆಕ್ಕಿಗೆ ತಿನ್ನಿಸಿದುದು. ನೋಡಿದೆ ಭಗವತಿಯೇ ಎಲ್ಲವೂ ಆಗಿರುವುದನ್ನು —ಬೆಕ್ಕು ಕೂಡ.

ಭಗವತಿ ಮತ್ತು ಜನನಿ. ಯಾರು ಸರ್ವವ್ಯಾಪಿಯಾಗಿದ್ದುಕೊಂಡು ಜಗದ್ರೂಪವನ್ನು ಧರಿಸಿದ್ದಾಳೊ, ಆಕೆಯೇ ಭಗವತಿ. ಜನನೀ ಎಂದರೆ ಹೆತ್ತ ತಾಯಿ, ಈ ಶರೀರಕ್ಕೆ ಜನ್ಮ ಕೊಡತಕ್ಕವಳು. ನಾನು "ಭಗವತಿ" "ಭಗವತಿ" ಎಂದು ಹೇಳುತ್ತಿದ್ದ ಹಾಗೇ ಸಮಾಧಿಸ್ಥನಾಗಿಬಿಡುತ್ತಿದ್ದೆ. "ಭಗವತಿ", "ಭಗವತಿ" ಎಂದು ಹೇಳುತ್ತಿದ್ದ ಹಾಗೇ ಜಗಜ್ಜನನಿಯನ್ನು ಹತ್ತಿರಕ್ಕೆ ಎಳೆದುಕೊಂಡು ಬರುತ್ತಿರುವಂತೆ ಆಗುತ್ತಿತ್ತು. ಇದು ಬೆಸ್ತರು ಮೊದಲು ಬಲೆ ಬೀಸಿ ಅನಂತರ ಅದನ್ನು ಎಳೆಯುವಾಗ ದೊಡ್ಡ ದೊಡ್ಡ ಮೀನು ಅದಕ್ಕೆ ಬಿದ್ದಿರುವುದು ಗೊತ್ತಾಗುತ್ತದೆಯಲ್ಲ ಹಾಗೆ.

ಪರಮಹಂಸರು ಬಿಕ್ಕಿ ಬಿಕ್ಕಿ ಅಳುತ್ತ ಭಕ್ತರ ಹಿತಕ್ಕಾಗಿ ಈ ರೀತಿಯಾಗಿ ಭಗವತಿಯ ಹತ್ತಿರ ಪ್ರಾರ್ಥನೆ ಮಾಡುತ್ತಿದ್ದಾರೆ. ಏನಾಶ್ಚರ್ಯ! ಹೇಳುತ್ತಿದ್ದಾರೆ: "ತಾಯಿ, ಯಾರಾರು ನಿನ್ನನ್ನು ಸಮೀಪಿಸುತ್ತಾರೊ ಅವರ ಸಕಲ ಅಭೀಷ್ಟಗಳನ್ನೂ ಪೂರ್ಣ ಮಾಡಿಕೊಡು. ಆದರೆ ಅವರು ಒಮ್ಮೆ ಎಲ್ಲವನ್ನೂ ತ್ಯಾಗ ಮಾಡುವಂತೆ ಬಲಾತ್ಕರಿಸಬೇಡ. ಒಳ್ಳೇದು, ಕೊನೆಯಲ್ಲಿ ಹೇಗೆ ಬೇಕೊ ಹಾಗೇ ಮಾಡು. ನೀನು ಅವರನ್ನು ಸಂಸಾರದಲ್ಲಿ ಇಡುವುದಾದರೆ, ಒಮ್ಮೊಮ್ಮೆ ಅವರಿಗೆ ನೀನು ದರ್ಶನವನ್ನು ಕೊಡು. ಇಲ್ಲದಿದ್ದರೆ ಅವರು ಬದುಕಿಕೊಂಡಿರುವ ಬಗೆ ಹೇಗೆ? ಒಮ್ಮೊಮ್ಮೆ ನೀನು ಅವರಿಗೆ ನಿನ್ನ ದರ್ಶನ ಕೊಡದಿದ್ದರೆ ನಿನ್ನ ದರ್ಶನ ಮಾಡಬೇಕೆಂಬ ಉತ್ಸಾಹ ಅವರಿಗೆ ಹೇಗೆ ತಾನೇ ಬಂದೀತು? ಇಷ್ಟರ ಮೇಲೆ ಕೊನೆಗೆ ನಿನ್ನ ಇಚ್ಛೆ ಬಂದಂತೆ ಮಾಡು."

ಮಾಸ್ಟರ್, ಭವತಾರಿಣಿ ಕಾಳಿಯ ಕಡೆ ದೃಷ್ಟಿಸಿ ನೋಡುತ್ತಿದ್ದಾನೆ. ಕಾಣಬರುತ್ತಾ ಇದೆ, ಆಕೆ ತನ್ನ ಎಡಹಸ್ತದ್ವಯಗಳಲ್ಲಿ—ನರಮುಂಡ ಖಡ್ಗ ಹಿಡಿದುಕೊಂಡಿದ್ದಾಳೆ. ಬಲಹಸ್ತದ್ವಯಗಳಿಂದ ವರ ಅಭಯಗಳನ್ನು ನೀಡುತ್ತಿದ್ದಾಳೆ. ಒಂದು ದೃಷ್ಟಿಯಿಂದ ಭಯಂಕರ ಸ್ವರೂಪಿಣಿ, ಇನ್ನೊಂದು ದೃಷ್ಟಿಯಿಂದ ಭಕ್ತವತ್ಸಲಾ ಮಾತೆ. ಎರಡು ಭಾವಗಳೂ ಸಮಾವೇಶಗೊಂಡಿವೆ. ಭಕ್ತರಿಗೆ, ದೀನಹೀನರಿಗೆ ದಯಾಮಯಿ, ಪ್ರೇಮಮಯಿ ತಾಯಿ. ಆದರೆ ಇದೂ ಸತ್ಯ, ಆಕೆ ಭಯಂಕರ ಸ್ವರೂಪಿಣಿ. ಕಾಲ ಕಾಮಿನಿ, ಒಂದೇ ಆಧಾರದಲ್ಲಿ ಏಕೆ ಎರಡು ಭಾವಗಳೋ ಭಗವತಿಗೇ ಗೊತ್ತು.

ಕೊಯರ್ ಸಿಂಗ್ ಒಮ್ಮೆ ನನಗೆ ಹೇಳಿದ: "ನಿಮಗೆ ಇನ್ನೂ ದೇಹದ ಮೇಲೆ ಭಾವನೆ ಇದೆ." ನನ್ನ ಸ್ವಭಾವ ಇದು—ನನ್ನ ತಾಯಿಗೆ ಎಲ್ಲ ಗೊತ್ತಿದೆ ಎಂಬುದು. ರಾಜೇಂದ್ರ ಮಿತ್ರನ ಮನೆಯಲ್ಲಿ ಮಾತನಾಡುವವಳು ಅವಳೇ. ಆಕೆಯ ಮಾತೇ ಮಾತು. "ಸರಸ್ವತಿಯ ಜ್ಞಾನ ಭಂಡಾರದ ಒಂದು ಕಿರಣ ಸಹಸ್ರಾರು ಮಂದಿ ಪಂಡಿತರನ್ನು ದಿಗ್ಭ್ರಮೆಗೊಳಿಸಿಬಿಡಬಲ್ಲದು."

"ಭಗವತಿ ನನ್ನನ್ನು ಭಕ್ತನ ಅವಸ್ಥೆಯಲ್ಲಿ—ವಿಜ್ಞಾನಿಯ ಅವಸ್ಥೆಯಲ್ಲಿ ಇಟ್ಟಿದ್ದಾಳೆ. ಈ ಕಾರಣದಿಂದಲೇ ನಾನು ರಾಖಾಲ ಮೊದಲಾದವರೊಡನೆ ಹುಡುಗಾಟವಾಡುವುದು. ಆಕೆಯೇನಾದರೂ ನನ್ನನ್ನು ಜ್ಞಾನಿಯ ಅವಸ್ಥೆಯಲ್ಲಿ ಇಟ್ಟಿದ್ದರೆ ಇದೆಲ್ಲ ಸಾಧ್ಯವಾಗುತ್ತಿರಲಿಲ್ಲ.

ಈ ಅವಸ್ಥೆಯಲ್ಲಿ ಕಂಡುಬರುತ್ತದೆ, ಭಗವತಿಯೇ ಎಲ್ಲವೂ ಆಗಿರುವುದು. ಎಲ್ಲೆಲ್ಲೂ ಆಕೆಯೇ ಕಾಣುತ್ತಿದ್ದಾಳೆ. ಕಾಳೀ ದೇವಾಲಯದಲ್ಲಿ ನನಗೆ ಅನುಭವವಾಯಿತು, ಎಲ್ಲವೂ ಭಗವತಿಯೇ ಆಗಿರುವುದು. ದುಷ್ಟರೂ ಕೂಡ—ಭಾಗವತ ಪಂಡಿತನ ಸೋದರ ಕೂಡ.

ಒಮ್ಮೆ ನಾನು ರಾಮಲಾಲನ ತಾಯಿಯನ್ನು ಬಯ್ಯುವುದರಲ್ಲಿದ್ದು ತಡೆದುಕೊಳ್ಳಬೇಕಾಯಿತು. ಅವಳು ಕಂಡುಬಂದಳು, ಭಗವತಿಯ ಒಂದು ರೂಪವೇ ಆಗಿ. ಕುಮಾರಿಯರ ಅಂತರ್ಯದಲ್ಲಿ ಭಗವತಿ ಕಾಣಬರುವುದರಿಂದ ನಾನು ಅವರನ್ನು ಪೂಜಿಸುತ್ತಿದ್ದೇನೆ. ನನ್ನ ಹೆಂಡತಿ ನನ್ನ ಕಾಲನ್ನು ಒತ್ತುತ್ತಾಳೆ. ಆದರೆ ಅನಂತರ ಆಕೆಗೆ ನಮಸ್ಕಾರ ಮಾಡುತ್ತೇನೆ. ಭಗವತಿ ನನ್ನನ್ನು ಎಲ್ಲರಲ್ಲೂ ಭಗವಂತನನ್ನು ನೋಡುವ ಅವಸ್ಥೆಯಲ್ಲಿ ಇಟ್ಟಿರುವುದರಿಂದ ನಾನು ಪ್ರತಿನಮಸ್ಕಾರ ಮಾಡಬೇಕಾಗಿದೆ.

(ಶ್ರೀರಾಮಕೃಷ್ಣವಚನವೇದದಿಂದ)